ವೇಲೆ ಸರ್ಕಾರ ಈ ಹತೋಟಿ ಇಟ್ಟುಕೊಳ್ಳುವದು ಸರಿಯೇ? ಈ ಸಾಹಿತ್ಯ ಅಕಾಡಮಿ ಬುದ್ಧಿಜೀವಿಗಳಿಗೆ ಸಂಬಂಧಪಟ್ಟದ್ದಾದ್ದರಿಂದ ಸಂವಿಧಾನದಲ್ಲಿ ಈ ಬಗ್ಗೆ ಏನು ಇದೆ ಅದನ್ನು ತಿದ್ದುಪಡಿ ಮಾಡಿ ಆ ಅಕಾಡಮಿಯಲ್ಲೇ ಯಾರಾದರೂ ಸಾಹಿತಿಗಳಾಗಿರುವವರನ್ನು ಅಧ್ಯಕ್ಷರನ್ನಾಗಿ ಮಾಡುವದು ಯುಕ್ತ ಎಂದು ನಾನು ಹೇಳುತ್ತೇನೆ. ನಾನು ಈ ರೀತಿ ಹೇಳುವದು ವಿದ್ಯಾಮಂತ್ರಿಗಳನ್ನು ದೋಷಾರೋಪಣೆ ಮಾಡುತ್ತೇನೆ ಅನ್ನುವ ಪ್ರಶ್ನೆ ಅಲ್ಲ. ಇದು ತತ್ವದ ಪ್ರಶ್ನೆಗೆ ಸಂಬಂಧಪಟ್ಟದ್ದು. ಈ ಬುದ್ಧಜೀವಿಗಳು ಸ್ವತಂತ್ರವಾಗಿ ತಾವಾಗಿಯೇ ವಿಮರ್ಶೆ ಮಾಡಿ ಈ ಸಾಹಿತ್ಯದ ಮೂಲಗಳನ್ನು ವಿಚಾರ ಮಾಡುವುದು ಇದರಲ್ಲಿ ಅವಶ್ಯವಾಗಿದೆ ಈ ಬಗ್ಗೆ ಯಾವುದೂ ಕೂಡ ಸರ್ಕಾರದ್ದು ಹಸ್ತಕ್ಷೇಪ ಇರಬಾರದು. ಇದರಲ್ಲಿ ಸಂಪೂರ್ಣ ಸ್ವಾಯುತ್ತತೆ ಇದೆ ಎನ್ನುವುದು ಮೂಲಭೂತವಾದ ಪ್ರಶ್ನೆ. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಕನ್ನಡ ಸಾಹಿತ್ಯ ಪರಿಷತ್ತಾಗಲಿ ಅಥವಾ ಸಂಗೀತ ಸಾಹಿತ್ಯ ಅಕಾಡಮಿಯಾಗಲಿ ಇವಕ್ಕೆ ಸಂಪೂರ್ಣ ಸ್ವಾಯತ್ತತೆ ಇರಬೇಕು. ಮತ್ತು ಅಲ್ಲಿ ಈ ಬುದ್ಧಿಜೀವಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು. ಆದರೆ ಅವುಗಳಿಗೆ ನೆರವು ನೀಡುವವಾಗಿದ್ದರೆ ಆ ಕೆಲಸ ನಿಮ್ಮದಾಗಿರಬೇಕೆ ಹೊರತು ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಮಾನ್ಯ ವಿದ್ಯಾಮಂತ್ರಿಗಳು ಈ ಬಗ್ಗೆ ಇರತಕ್ಕಂಥ ಸಂವಿಧಾನವನ್ನು ತಿದ್ದುಪಡಿ ಮಾಡಿ ಅಲ್ಲೇ ಸಾಹಿತ್ಯದಲ್ಲಿರುವವರನ್ನು ಯಾರಾದರೂ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವುದು ಯುಕ್ತವಾದುದು ಎಂದು ಹೇಳುತ್ತೇನೆ. ಈ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳ ಅಭಿಪ್ರಾಯ ಏನಿದೆ ಎನ್ನುವದನ್ನು ಕೇಳಲು ಅಪೇಕ್ಷೆ ಪಡುತ್ತೇನೆ.

ಅಧ್ಯಕ್ಷರು —ಅವರು ಈ ಬಗ್ಗೆ ಸ್ಟೇಟ್‌ಮೆಂಟ ಮಾಡಿರುವದರಿಂದ ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

NOTICES GIVEN UNDER RULE 312

ಶ್ರೀ ಜೆ. ಎಲ್. ಕಬಾಡಿ.—ಅಧ್ಯಕ್ಷರೇ, ನಾನು ರೂಲ್ ೩೧೨ರ ಪ್ರಕಾರ ಒಂದು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ಅದನ್ನು ಸಾಯಂಕಾಲ ನೋಡೋಣ,

ಶ್ರೀ ಕಾಗೋಡು ತಿಮ್ಮಪ್ಪ.—ನಾನೊಂದು ಪ್ರಮುಖವಾದ ಪ್ರಶ್ನೆಯನ್ನ ರೂಲ್ ೩೧೨ರ ಪ್ರಕಾರ ಕಳುಹಿಸಿದ್ದೇನೆ. ಅದು ಏನೆಂದರೆ ಮಂಡ್ಯ ಜಿಲ್ಲೆಯಲ್ಲಿ ಒಂದು ಹಸ್ತಪತ್ರಿಕೆಯನ್ನು ಪ್ರಿಂಟ ಮಾಡಿಸಿ ಹಂಚಿದ್ದಾರೆ ಅದರಲ್ಲಿ ಶಿರೋನಾಮೆಯಲ್ಲಿ ಹಿಂದೂಗಳು ಎಂದು ಪ್ರಿಂಟ ಮಾಡಿಸಿ ಹೊರಡಿಸಿದ್ದಾರೆ. ಇದರ ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು.—ತಾವು ಈಗ ಕಳುಹಿಸಿಬಿಟ್ಟು ಈಗಲೇ ಹೇಳಿಬಿಡಿ ಎಂದರೆ ಅದು ಸರ್ಕಾರಕ್ಕೆ ಗೊತ್ತಾಗಬೇಡವೇ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಇದನ್ನು ಈವಾಗಲೇ ಏತಕ್ಕೆ ಕೇಳುತ್ತಿದ್ದೇನೆ ಎಂದರೆ ಇದರಲ್ಲಿ ಪ್ರಾಮುಖ್ಯತೆ ಇದೆ ಎಂದು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—೧೨ ಗಂಟೆಗೆ ಈ ಸಭೆ ಸೇರುವಾಗ ಇದನ್ನು ೧೨–೩೦ ಗಂಟೆಗೆ ಕಳುಹಿಸಿದ್ದೀರಿ. ಆದುದರಿಂದ ದಯವಿಟ್ಟು ಕುಳಿತುಕೊಳ್ಳಿ. ಅದನ್ನು ನೋಡುತ್ತೇನೆ.

1–30 P. M.

†ಶ್ರೀ ಜೆ. ಎಲ್. ಕಬಾಡಿ (ಬಳ್ಳಾಳ್ಳಿ).—ಮಾನ್ಯ ಮಂತ್ರಿಗಳಾದ ಶ್ರೀಮಾನ್ ಎಸ್. ಎಂ. ಕೃಷ್ಣರವರು ಅಷೋಷಿಷನ್ ಲೀಡರ್ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಕ್ಕೆ ಪ್ರತಿಯಾಗಿ ಅದರ ಮೇಲೆ ಮಾತನಾಡುವಾಗ ಮೇಲ್ಮನೆಯಲ್ಲಿ ಒಂದು ಭರವಸೆಯನ್ನು ಕೊಟ್ಟಿದ್ದರು ಇದನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವುದಕ್ಕೆ ನಾನು ಸದಾ ಸಿದ್ಧನಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಇಲ್ಲಿಯವರೆಗೆ ಯಾವ ರೀತಿ ತೀರ್ಮಾನ ತೆಗೆದುಕೊಂಡಿಲ್ಲ. ನಾನು ಇದರ ಬಗ್ಗೆ ಮುದ್ದಾಮ್ ಆಗಿ ಬಂದು ನೋಟೀಸ್ ಕೊಟ್ಟಿದ್ದೆನು. ಆದ್ದರಿಂದ ಡೆಪ್ಯುಟಿ ಲೀಡರ್ ಸಭೆಯಲ್ಲಿ ಇದ್ದಾರೆ ಅವರಿಗೆ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ತಾವು ಹೇಳಬೇಕು. ನ್ಯಾಯಾಂಗ ತನಿಖೆ ನಡೆಸುತ್ತಾರೋ ಇಲ್ಲವೋ ಹೇಳಲಿ. ಅವರು ಮೇಲ್ಮನೆಯಲ್ಲಿ ಮಾತನಾಡುವಾಗ ಇದನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವುದಕ್ಕೆ ಸದಾ ಸಿದ್ಧನಿದ್ದೇನೆ. ಇದರ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಪತ್ರ ಬರೆದಿದ್ದೇನೆ ಎಂದು ಹೇಳಿದ್ದಾರೆ. ದಯವಾಡಿ ತಾವು ಸರ್ಕಾರಕ್ಕೆ ಹೇಳಿ ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಎಂಬುದನ್ನು ಅವರು ಹೇಳಬೇಕು. ನಾನು ೬–೭ ಕಾಲಿಂಗ್ ಅಟೆನ್‌ಷನ್ ನೋಷನ್‌ಗಳನ್ನು ಕಳುಹಿಸಿದ್ದೇನೆ, ಅದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ನಾವು ಇವೊತ್ತು ಮಾನ್ಯ ಸದಸ್ಯರಿಗೂ ಅನುಕೂಲವಾಗಲಿ ಮತ್ತು ಸರ್ಕಾರಕ್ಕೂ ಅನುಕೂಲವಾಗಲಿ ಎಂದು ಐದು ಕಾಲಿಂಗ್ ಅಟೆನ್‌ಷನ್ ನೋಟಿಸುಗಳನ್ನು ತೆಗೆದುಕೊಂಡಿದ್ದೇವೆ. ಒಬ್ಬರು ೭–೮ ನೋಟಿಸುಗಳನ್ನು ಕಳುಹಿಸಿರುತ್ತಾರೆ ಆದರೆ ಎಲ್ಲರ ಕಾಲಿಂಗ್ ಅಟೆನ್‌ಷನ್ ನೋಟಿಸುಗಳನ್ನೂ ಅಕಾಮ್‌ಡೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಇದು ಒಂದು ರೀತಿ ನೀತಿ ಇಲ್ಲದೆ ಹೋಗಿದೆ. ಮಾನ್ಯ ಕಬಾಡಿಯವರು ದಯವಿಟ್ಟು ಪ್ಲೆಸಿಸಬೇಕು ಇದು ಯಾರ ಕೈಯ್ಯಲ್ಲೂ ಸಾಧ್ಯವಾಗದ ಮಾತು.

ಶ್ರೀ ಜೆ. ಎಲ್. ಕಬಾಡಿ.—ನಾನು ಈ ವಿಷಯದ ಬಗ್ಗೆ ಸ್ವತಃ ತಮ್ಮ ಆಫೀಸಿಗೆ ಬಂದು ಕೊಟ್ಟಿದ್ದೇನೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಆದ್ದರಿಂದ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಸರ್ಕಾರದವರು ಕೊಡುವಂತೆ ಹೇಳಬೇಕು.